ದಿನಾಂಕ 18-08-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 8, 9, 11 ಮತ್ತು 12ನೇ ಪ್ರತಿವಾದಿಗಳ ಪರ ವಕೀಲರಿಂದಃ-

ನನ್ನ ಸಹೋದರರಲ್ಲಿ ಸೀನಪ್ಪ ಮೊದಲು ತೀರಿಕೊಂಡರು ಎಂದರೆ ಸರಿ. ನಂತರ ಕೆಂಚಪ್ಪ ತೀರಿಕೊಂಡರು ಎಂದರೆ ಸರಿ. ಆ ನಂತರ ರಂಗಪ್ಪ ತೀರಿಕೊಂಡರು ಎಂದರೆ ಸರಿ. ಸೀನಪ್ಪ ತೀರಿಕೊಂಡು ಸುಮಾರು 34 ವರ್ಷಗಳಾಗಿವೆ ಎಂದರೆ ಆಗಿರಬಹುದು. ಕೆಂಚಪ್ಪ ತೀರಿಕೊಂಡು 24-25 ವರ್ಷಗಳಾಗಿವೆ ಎಂದರೆ ಸರಿ. ರಂಗಪ್ಪ ತೀರಿಕೊಂಡು 14-15 ವರ್ಷಗಳಾಗಿವೆ ಎಂದರೆ ಸರಿ. ತಿಮ್ಮಕ್ಕ ನನ್ನ ಅಕ್ಕ. ಆಕೆಯನ್ನು ಕುಂಟಮ್ಮ ಎಂದು ಸಹ ಕರೆಯುತ್ತಿದ್ದರು ಎಂದರೆ ಸರಿ. ಆಕೆ 2013ರಲ್ಲಿ ತೀರಿಕೊಂಡರು ಎಂದರೆ ಸರಿ. ಕುಂಟಮ್ಮನಿಗೆ ಮದುವೆಯಾಗಿರಲಿಲ್ಲ, ಮಕ್ಕಳಿರಲಿಲ್ಲ ಎಂದರೆ ಸರಿ. ಆಕೆ ಕೆಂಚಪ್ಪನ ಕುಟುಂಬದಲ್ಲಿದ್ದರು ಎಂದರೆ ಸಾಕ್ಷಿಯು ಒಟ್ಟು ಕುಟುಂಬದಲ್ಲೇ ಇದ್ದರು, ಕೆಂಚಪ್ಪನ ಮಕ್ಕಳು ಸಾಕುತ್ತಿದ್ದರು ಎಂದು ನುಡಿಯುತ್ತಾರೆ. ಕುಂಟಮ್ಮನನ್ನು ಹೆಜ್ಜಾಲದಲ್ಲಿ ಅಂತ್ಯ ಸಂಸ್ಕಾರ ಮಾಡಲಾಯಿತು ಎಂದರೆ ಸರಿ. ಕುಂಟಮ್ಮ ಕೆಂಚಪ್ಪನ ಮನೆಯಲ್ಲೇ ತೀರಿಕೊಂಡದ್ದು ಎಂದರೆ ಸರಿ.

ಸಾಕ್ಷಿಗೆ ಒಂದು ಫೋಟೋ ತೋರಿಸಿ ಇದು ಹೆಜ್ಜಾಲದಲ್ಲಿರುವ ಮನೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1ರ ಮನೆಯ ಖಾನೇಷುಮಾರಿ/ಖಾತಾ ನಂ.27 ಎಂದರೆ ಗೊತ್ತಿಲ್ಲ. ನಿಡಿ-1ರಲ್ಲಿ ಕಾಣುವ ಮನೆ ಮತ್ತು ಖಾಲಿ ಜಾಗದ 27X95 ಅಡಿಗಳು ಎಂದರೆ ಸರಿ. ಸದರಿ ಮನೆಯ ಪೂರ್ವಕ್ಕೆ ಮಲ್ಲಯ್ಯನ ಮಗ ರಂಗಣ್ಣ, ಪಶ್ಚಿಮಕ್ಕೆ ತೋಟಕ್ಕೆ ಹೋಗುವ ದಾರಿ, ಉತ್ತರಕ್ಕೆ ದೊಡ್ಡೇರಿ ರಸ್ತೆ ಮತ್ತು ದಕ್ಷಿಣಕ್ಕೆ ರಾಜಬೀದಿ ಎಂದರೆ ಸರಿ. ನಿಡಿ-1ರಲ್ಲಿ ಕಾಣುವ ಮಂಗಳೂರು ಹೆಂಚಿನ ಮನೆಯಲ್ಲಿ ಕಾಣುವ ಮಂಗಳೂರು ಹೆಂಚನ್ನು ಬಿಟ್ಟು ಕಪ್ಪು ಹೆಂಚು ಇತ್ತು ಎಂದರೆ ಸರಿ. ಕೆಂಪು ಹೆಂಚಿನ ವಿಸ್ತೀರ್ಣ 27X32 ಅಡಿಗಳು ಎಂದರೆ ಸರಿ.

ಉಳಿಕೆ ಕಪ್ಪು ಹೆಂಚಿನ ಮನೆ ಮತ್ತು ಖಾಲಿ ನಿವೇಶನದ ಒಟ್ಟು ವಿಸ್ತೀರ್ಣ 27X63 ಅಡಿಗಳು ಎಂದರೆ ಸರಿ. 27X32 ಅಡಿ ಕಪ್ಪು ಹೆಂಚಿನ ಮನೆಯ ಭಾಗವನ್ನು ಹೊಡೆದು ಹಾಕಿ ಶೀಟಿನ ಮನೆಯನ್ನು ಸೀನಪ್ಪರವರು ಕಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ರಂಗಪ್ಪನವರ ಜಾಗ ಸಹ ಇದೆ ಎಂದು ನುಡಿಯುತ್ತಾರೆ. ರಂಗಪ್ಪನವರ ಜಾಗ 27X32 ಅಡಿಗಳು ಎಂದರೆ ಸರಿ. ನಿಡಿ-1ರಲ್ಲಿ ಕಾಣುವ ಮಂಗಳೂರು ಕೆಂಪು ಹೆಂಚಿನ ಮನೆಯಲ್ಲಿ ಕೆಂಚಪ್ಪನ ಕುಟುಂಬದವರು ವಾಸವಿದ್ದಾರೆ ಎಂದರೆ ಸರಿ. ನಿಡಿ-1ರಲ್ಲಿ ಕಾಣುವ ಮಂಗಳೂರು ಹೆಂಚಿನ ಮನೆಯಲ್ಲಿ ಕೆಂಚಪ್ಪ ಮತ್ತು ಅವರ ಕುಟುಂಬದವರು ಸುಮಾರು 56-57 ವರ್ಷಗಳಿಂದ ವಾಸವಿದ್ದಾರೆ ಎಂದರೆ ಸಾಕ್ಷಿಯು ರಂಗಪ್ಪನವರು ಸಹ ಇದ್ದರು ಎಂದು ನುಡಿಯುತ್ತಾರೆ. ಸೀನಪ್ಪರವರು ಕಪ್ಪು ಹೆಂಚಿನ ಮನೆ ಹೊಡೆದು ಹಾಕಿ ಶೀಟಿನ ಮನೆ ಕಟ್ಟಿ 10-15 ವರ್ಷಗಳಾಗಿವೆ. ಖಾಲಿ ಜಾಗದಲ್ಲಿ ರಂಗಪ್ಪ ಮನೆ ಕಟ್ಟಿಲ್ಲ, ಅವರ ಜಾಗ ಹಾಗೆಯೇ ಇದೆ. ನಿಡಿ-1ರಲ್ಲಿ ಕಾಣುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸೇರಿಸಿಲ್ಲ.

ನನ್ನ ದೊಡ್ಡ ಮಗನಿಗೆ ಈಗ 35 ವರ್ಷ ವಯಸ್ಸು. ಎರಡನೇ ಮಗನಿಗೆ 30 ವರ್ಷಗಳಾಗಿವೆ. 9ನೇ ಪ್ರತಿವಾದಿ ಗೋವಿಂದರಾಜುಗಿಂತ ನನ್ನ ಮಗ ಎರಡು ವರ್ಷ ದೊಡ್ಡವನು. 9ನೇ ಪ್ರತಿವಾದಿಗೆ ಈಗ 45 ವರ್ಷ ವಯಸ್ಸಾಗಿದೆ ಎಂದರೆ ಗೊತ್ತಿಲ್ಲ. ನನ್ನ ಮಗ ಗೋವಿಂದರಾಜುವಿಗೆ 48 ವರ್ಷ ವಯಸ್ಸಾಗಿದೆ ಎಂದರೆ ಸಾಕ್ಷಿಯು ನನಗೆ ಅಷ್ಟು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಹೆಜ್ಜಾಲ ಗ್ರಾಮದ ಸರ್ವೆ ನಂ.40/3ರ 23 ಗುಂಟೆ ನಮ್ಮ ತಂದೆಯ ಕಾಲದಲ್ಲಿ ಒಟ್ಟು ಕುಟುಂಬದಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ 23 ಗುಂಟೆಯನ್ನು ನನ್ನ ಸಹೋದರಿ ಕುಂಟಮ್ಮನ ಜೀವನಾಂಶಕ್ಕೆ ಇಟ್ಟಿದ್ದರು ಎಂದರೆ ಸರಿ. ಆ ಆಸ್ತಿ ಏನಾಯಿತು ಎಂದರೆ ಸಾಕ್ಷಿಯು ಅದನ್ನು ರಂಗಪ್ಪನವರೇ ಮಾರಾಟ ಮಾಡಿ ಹಣ ಬಳಸಿಕೊಂಡರು ಎಂದು ನುಡಿಯುತ್ತಾರೆ. ಆ ಜಮೀನಿನ ದಾಖಲೆಗಳನ್ನು ನಾನು ನೋಡಿ, ತಿಳಿದುಕೊಂಡಿಲ್ಲ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಯಾಕೆ ಸೇರಿಸಿಲ್ಲ ಎಂದರೆ ಮಾರಾಟ ಮಾಡಿದ್ದಾರೆ. ಅದನ್ನು ಮಾರಾಟ ಮಾಡಿ ಎಷ್ಟು ವರ್ಷಗಳಾಗಿವೆ ಎಂದು ಗೊತ್ತಿಲ್ಲ. ಅದನ್ನು

ಗಾಳಹನುಮಯ್ಯರವರಿಗೆ ಮಾರಿದ್ದಾರೆ. ಗಾಳಹನುಮಯ್ಯರವರನ್ನು ಇದು ನಮ್ಮ ಕುಟುಂಬದ ಆಸ್ತಿ ಎಂದು ಕೇಳಿದ್ದೀರಾ ಎಂದರೆ ಸಾಕ್ಷಿಯು ನನ್ನ ಅಕ್ಕ ಕುಂಟಮ್ಮನೇ ಕೇಳಿ ಕೇಸು ಹಾಕಿದರು ಎಂದು ನುಡಿಯುತ್ತಾರೆ. ನಾನು ಆ ದಾವೆಗೆ ಹೋಗಿಲ್ಲ. ಆ ದಾವೆ ಏನಾಯಿತು ಎಂದು ನನಗೆ ಗೊತ್ತಿಲ್ಲ. ನನ್ನ ಅಕ್ಕ ಕುಂಟಮ್ಮ ತೀರಿಕೊಂಡ ನಂತರವೂ ಸಹ ನಾನು ಆ ಆಸ್ತಿಯ ಬಗ್ಗೆ ವಿಚಾರ ಮಾಡಿಲ್ಲ.

ಸರ್ವೆ ನಂ.40/3ರ 23 ಗುಂಟೆಯನ್ನು ಕೆಂಚಪ್ಪನವರು ದಿನಾಂಕ 05.03.1984ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ರಂಗಪ್ಪನೇ ಮಾರಾಟ ಮಾಡಿರುವುದು, ಕೆಂಚಪ್ಪ ಅಲ್ಲ ಎಂದು ನುಡಿಯುತ್ತಾರೆ. ಕೆಂಚಪ್ಪನ ಕುಟುಂಬದವರು ನಮ್ಮ ಜೊತೆ ಚೆನ್ನಾಗಿದ್ದಾರೆ. ಸಾಕ್ಷಿಗೆ ದಿನಾಂಕ 05.03.1984ರ ಕ್ರಯಪತ್ರದ ದೃಢೀಕೃತ ಪ್ರತಿ ತೋರಿಸಿ, ಓದಿ ಈ ದಾಖಲೆ ಪ್ರಕಾರ ಕೆಂಚಪ್ಪನವರು ಸರ್ವೆ ನಂ.40/3ರಲ್ಲಿ 20 ಗುಂಟೆಯನ್ನು ಗಾಳಹನುಮಯ್ಯರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದೊಡ್ಡತಿಮ್ಮಯ್ಯನವರ ಮಗ ಕೆಂಚಪ್ಪ ಎಂದರೆ ನನ್ನ ಅಣ್ಣ. ಸರ್ವೆ ನಂ.40/3ರ 20 ಗುಂಟೆ ಜಮೀನಿನಲ್ಲಿ ನಿಮಗೆ ಹಕ್ಕಿದೆಯಾ ಎಂದರೆ ಸಾಕ್ಷಿಯು ಎಲ್ಲದರಲ್ಲೂ ಹಕ್ಕಿದೆ, ಕೆಂಚಪ್ಪ ಯಾವುದನ್ನೂ ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ರಂಗಪ್ಪ ಹೇಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೆ ಪಾರಿಕತ್ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಪಾರಿಕತ್ ಮಾಡಿಕೊಂಡು ಸುಮಾರು ವರ್ಷಗಳಾಗಿವೆ. ಪಾರಿಕತ್ ಗೊತ್ತಾದ ನಂತರ ನಮಗೆ ಗೊತ್ತಿಲ್ಲದ ಹಾಗೆ ಪಾರಿಕತ್ ಮಾಡಿಕೊಂಡಿದ್ದಾರೆ ಎಂದು ಈ ದಾವೆ ಹಾಕಿದ್ದೇವೆ. ಪಾರಿಕತ್ ಆದ ಮೇಲೆ ಎರಡು ಐಟಂಗಳನ್ನು ಮಾರಿದ್ದಾರೆ. ಮಾರಾಟವನ್ನು ಒಟ್ಟು ಕುಟುಂಬದಲ್ಲಿದ್ದಾಗ ಮೂರು ಜನ ಮಾರಿದ್ದಾರೆ. ಅದು ಸರ್ವೆ ನಂ.15/3. ಅದನ್ನು ರಾಘವೇಂದ್ರರವರಿಗೆ ಮಾರಿದ್ದಾರೆ. ಮತ್ತೊಂದು ಸರ್ವೆ ನಂ.38/5ರ 9 ಗುಂಟೆ. ಅದನ್ನು ವಾಜರಹಳ್ಳಿ ಮಂಜಪ್ಪನಿಗೆ ಮಾರಿದ್ದಾರೆ. ಅದನ್ನು ಕೆಂಚಪ್ಪ ಮಾರಾಟ ಮಾಡಿದ್ದಾರೆ.

ದಿನಾಂಕ 10.12.1968ರಂದು ಕೆಂಚಪ್ಪ, ರಂಗಪ್ಪ ಮತ್ತು ಸೀನಪ್ಪರವರು ಪಂಚಾಯಿತಿ ಪಾರಿಕತ್ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಅದರ ಪ್ರಕಾರ ಮೂರು ಜನ ಆಸ್ತಿಗಳನ್ನು ಹಂಚಿಕೊಂಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಒಟ್ಟು ಕುಟುಂಬದಲ್ಲೇ ಇದ್ದಾರೆ, ಜಮೀನುಗಳು ಹಾಗೆಯೇ ಇವೆ ಎಂದು ನುಡಿಯುತ್ತಾರೆ. ವಿಭಾಗ ಪತ್ರದಲ್ಲಿ ಹೆಜ್ಜಾಲದ ಸರ್ವೇ ನಂ.40/3ರಲ್ಲಿ 20 ಗುಂಟೆಯನ್ನು ಸಹೋದರಿ ತಿಮ್ಮಕ್ಕ ಅಲಿಯಾಸ್ ಕುಂಟಮ್ಮನಿಗೆ ಎಂದು, ಆಕೆಯ ಮರಣಾ ನಂತರ ಮೂರೂ ಜನರು ಸಮನಾಗಿ ಹಂಚಿಕೊಳ್ಳುವುದು ಎಂದು ಬರೆದಿದೆ ಎಂದರೆ ಸಾಕ್ಷಿಯು ಬರೆದಿದೆ, ಆದರೆ ರಂಗಪ್ಪ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪಂಚಾಯಿತಿ ಪಾರಿಕತ್‌ನಲ್ಲಿ ಸರ್ವೇ ನಂ.15/1ರಲ್ಲಿ 24 ಗುಂಟೆ ಕೆಂಚಪ್ಪನಿಗೆ, 24 ಗಂಟೆ ರಂಗಪ್ಪನಿಗೆ, 24 ಗುಂಟೆ ಸೀನಪ್ಪನಿಗೆ ಎಂದು ಬರೆದಿದೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ಸರ್ವೇ ನಂ.74/1ರಲ್ಲಿ ಸಹ ಕೆಂಚಪ್ಪ, ರಂಗಪ್ಪ ಮತ್ತು ಸೀನಪ್ಪನಿಗೆ ತಲಾ 24 ಗುಂಟೆ ಎಂದು ಬರೆದಿದೆ ಎಂದರೆ ಸಾಕ್ಷಿಯು ಇನ್ನೂ ನನ್ನ ತಂದೆಯ ಹೆಸರಿನಲ್ಲೇ ಇದೆ ಎಂದು ನುಡಿಯುತ್ತಾರೆ. ಮನೆಯಲ್ಲಿ ದಕ್ಷಿಣ ಭಾಗ ಕೆಂಚಪ್ಪನಿಗೆ, ಪೂರ್ವದ ಭಾಗ ರಂಗಪ್ಪನಿಗೆ, ಪಶ್ಚಿಮದ ಭಾಗ ಸೀನಪ್ಪನಿಗೆ ಎಂದು ಬರೆದಿದೆ ಎಂದರೆ ಸಾಕ್ಷಿಯು ಬರೆದಿದೆ ಎಂದು ನುಡಿಯುತ್ತಾರೆ. ಸರ್ವೇ ನಂ.92ರಲ್ಲಿ ಕೆಂಚಪ್ಪನಿಗೆ 1 ಎಕರೆ 14 ಗುಂಟೆ, ಸೀನಪ್ಪನಿಗೆ 1 ಎಕರೆ 14 ಗುಂಟೆ, ರಂಗಪ್ಪನಿಗೆ 1 ಎಕರೆ 13 ಗುಂಟೆ ಎಂದು ಪಂಚಾಯಿತಿ ಪಾರಿಕತ್‌ನಲ್ಲಿ ಬರೆದಿದೆ ಎಂದರೆ ಸಾಕ್ಷಿಯು ಮೂರೂ ಜನರ ಹೆಸರಿನಲ್ಲಿಯೂ ಇದೆ ಎಂದು ನುಡಿಯುತ್ತಾರೆ.

ಪಂಚಾಯಿತಿ ಪಾರಿಕತ್‌ನಲ್ಲಿ ಸರ್ವೇ ನಂ.39 ಪೂರ್ತಿ 1 ಎಕರೆ 10 ಗುಂಟೆ

ರಂಗಪ್ಪನಿಗೆ ಹೋಗಬೇಕು ಎಂದು ಬರೆದಿದೆ ಎಂದರೆ ಸಾಕ್ಷಿಯು ಅದನ್ನು ನಮ್ಮ ಮದುವೆಗೆಂದು ಬಿಟ್ಟಿದ್ದರು, ಅದು ನಮಗೂ, ರಂಗಪ್ಪನಿಗೂ ಬರಬೇಕು ಎಂದು ನುಡಿಯುತ್ತಾರೆ. ಸದರಿ ಪತ್ರದಲ್ಲಿ 1 ಎಕರೆ 10 ಗುಂಟೆಯನ್ನು ನಿಮ್ಮ ಮದುವೆಯ ಖರ್ಚಿಗಾಗಿ ರಂಗಪ್ಪನ ಭಾಗಕ್ಕೆ ಕೊಟ್ಟಿದ್ದರು ಎಂದರೆ ಸಾಕ್ಷಿಯು ಇಲ್ಲ, ಮದುವೆಯನ್ನು ನನ್ನ ಅತ್ತೆ, ಮಾವನವರೇ ಮಾಡಿಕೊಂಡರು ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಸಾಲ ತೀರಿಸಲು, ಮಕ್ಕಳ ಮದುವೆಗಾಗಿ ಸರ್ವೆ ನಂ.39 ರಲ್ಲಿ 1 ಎಕರೆ 10 ಗುಂಟೆಯನ್ನು ಹೆಚ್ಚಿಗೆ ರಂಗಪ್ಪನ ಭಾಗಕ್ಕೆ ಬಿಟ್ಟಿದೆ ಎಂದು ಬರೆದಿದೆ ಎಂದರೆ ಸಾಕ್ಷಿಯು ಏನೇನೋ ಬರೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಿನಾಂಕ 10.12.1968 ರಿಂದಲೂ ಕೆಂಚಪ್ಪ, ರಂಗಪ್ಪ ಮತ್ತು ಸೀನಪ್ಪರವರ ನಡುವೆ ಯಾವುದೇ ಒಟ್ಟು ಕುಟುಂಬ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. 1968ರಲ್ಲೇ ವಿಭಾಗ ಪತ್ರದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ವಿಭಾಗ ಪತ್ರದ ಬಗ್ಗೆ ನಮಗೆ 10-15 ವರ್ಷಗಳ ಹಿಂದೆ ಗೊತ್ತಾಯಿತು.

ಲಕ್ಷ್ಮಮ್ಮನಿಗೆ ಮದುವೆಯಾಗಿ ಅವರಿಗೆ ಮಕ್ಕಳಾದ ನಂತರ ನನಗೆ ಮದುವೆಯಾಯಿತು. ಲಕ್ಷ್ಮಮ್ಮನ ಮಕ್ಕಳಿಗೆ ಎರಡು ವರ್ಷ ವಯಸ್ಸಾಗಿದ್ದಾಗ ನನಗೆ ಮದುವೆಯಾಯಿತು. ಲಕ್ಷ್ಮಮ್ಮನಿಗೆ ಮದುವೆಯಾದ ಎಷ್ಟು ವರ್ಷಕ್ಕೆ ಮಕ್ಕಳಾದವು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.15/1 ಎಷ್ಟು ವಿಸ್ತೀರ್ಣ ಎಂದರೆ ಸಾಕ್ಷಿಯು ಒಬ್ಬೊಬ್ಬರಿಗೆ 24 ಗುಂಟೆ ಬಂದಿದೆ ಎಂದು ನುಡಿಯುತ್ತಾರೆ. ಅಂದರೆ ಕೆಂಚಪ್ಪ, ರಂಗಪ್ಪ ಮತ್ತು ಸೀನಪ್ಪನಿಗೆ. ಅದು ಯಾವಾಗ ಬಂದಿತು ಎಂದರೆ ಸಾಕ್ಷಿಯು ಅದು ಮಾರಾಟ ಆಗಿದೆ ಎಂದು ನುಡಿಯುತ್ತಾರೆ. ಸರ್ವೆ ನಂ.15/1 1 ಎಕರೆ 32 ಗುಂಟೆ ಎಂದರೆ ಸರಿ. ಈ ದಾವೆಯಲ್ಲಿ ಸರ್ವೆ ನಂ.15/1ರ 1 ಎಕರೆ 32 ಗುಂಟೆಯನ್ನು ಸೇರಿಸಿಲ್ಲ. ಸಾಕ್ಷಿಯು ಮುಂದುವರೆದು ಸರ್ವೆ ನಂ.15/3ನ್ನು ನಾವು ಕೊಟ್ಟಿರುವುದು ಎಂದು ನುಡಿಯುತ್ತಾರೆ. ಸರ್ವೆ ನಂ.15/1ರಲ್ಲಿ ನಿಮ್ಮ ಕುಟುಂಬಕ್ಕೆ ಜಮೀನು ಇದೆಯಾ ಎಂದರೆ ಸಾಕ್ಷಿಯು ಅದು ಎಲ್ಲರಿಗೂ ಸೇರತಕ್ಕದ್ದು ಎಂದು ನುಡಿಯುತ್ತಾರೆ. ಆ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿದ್ದೇವೆ.

ಸರ್ವೇ ನಂ.15/1ರ ಪಹಣಿಯನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ವಕೀಲರ ಕೈಗೆ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಸರ್ವೇ ನಂ.15/1ರಲ್ಲಿ 1 ಎಕರೆ 2 ಗುಂಟೆ 14ನೇ ಪ್ರತಿವಾದಿ ಡಿ.ಎಸ್.ರಾಘವೇಂದ್ರರವರ ಹೆಸರಿನಲ್ಲಿದೆ ಎಂದರೆ ಸರಿ. ಅದಕ್ಕೂ ಮುಂಚೆ ಸದರಿ ಜಮೀನು ಎಂ.ಆರ್.25/1991-92ರಂತೆ ನನ್ನ ಅಣ್ಣ ರಂಗಪ್ಪನ ಹೆಸರಿಗೆ ಖಾತೆ ಬಂದಿತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲದ ಹಾಗೆ ವ್ಯವಹಾರ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಅದೇ ರೀತಿ ಎಂ.ಆರ್.81/1996-97ರಂತೆ 24 ಗುಂಟೆ ರಂಗಪ್ಪನ ಹೆಸರಿಗೆ ಸದರಿ ಸರ್ವೇ ನಂಬರ್‌ನಲ್ಲಿ ಖಾತೆ ಬಂದಿತ್ತು ಎಂದರೆ ಸಾಕ್ಷಿಯು ಹೆಣ್ಣು ಮಕ್ಕಳನ್ನು ಬಿಟ್ಟು ಅವರೊಬ್ಬರ ಹೆಸರಿಗೆ ಹೇಗೆ ಬಂತು ಎಂದು ಉತ್ತರಿಸಿರುತ್ತಾರೆ. ಸೀನಪ್ಪನ ಹೆಸರಿಗೂ ಸಹ 24 ಗುಂಟೆ ಎಂ.ಆರ್.81/1996-97ರಂತೆ ಖಾತೆ ಬಂದಿದೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಎಂ.ಆರ್ ದಾಖಲೆಗಳನ್ನು ತೆಗೆದುಕೊಂಡು ವಕೀಲರಿಗೆ ತೋರಿಸಿ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೆ ವ್ಯವಹಾರ ಮಾಡಿದ್ದಾರೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಸಮಯದ ಅಭಾವದಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.